**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.**

SC. No.40/2024

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
|---|---|---|
| ರಾಜ್ಯದ ಪರವಾಗಿ ದಾವಣಗೆರೆ ಬಡಾವಣೆ ಪೊಲೀಸ್ ಠಾಣೆ, ದಾವಣಗೆರೆ | | ವಿನಯ್ ಹೆಚ್.ಪಿ. ತಂದೆ ಪ್ರಕಾಶ್ ಹೆಚ್.ಪಿ. ವಯಸ್ಸು 39 ವರ್ಷ, ವಾಸಃ ನಂ.743/1, 10 ನೇ ಮೇನ್, 6 ನೇ ಕ್ರಾಸ್, ಪಿಜೆ ಬಡಾವಣೆ, ದಾವಣಗೆರೆ |

**ದೋಷಾರೋಪಣೆ**

ನಾನು ಶ್ರೀ. ಪ್ರವೀಣ್ ಕುಮಾರ್.ಆರ್.ಎನ್., ಬಿ.ಕಾಂ. ಎಲ್.ಎಲ್.ಬಿ, 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು , ದಾವಣಗೆರೆ ;-

ಆರೋಪಿತರಾದ - ವಿನಯ್ ಹೆಚ್.ಪಿ. ತಂದೆ ಪ್ರಕಾಶ್ ಹೆಚ್.ಪಿ. ವಯಸ್ಸು 39 ವರ್ಷ, ವಾಸಃ ನಂ.743/1, 10 ನೇ ಮೇನ್, 6 ನೇ ಕ್ರಾಸ್, ಪಿಜೆ ಬಡಾವಣೆ, ದಾವಣಗೆರೆ

ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪವಿಡುತ್ತೇನೆ.

1. ಮೊದಲನೇಯದಾಗಿ, ದಿಃ 02-01-2024 ರಂದು ಮಧ್ಯಾಹ್ನ 1-45 ಗಂಟೆಯಲ್ಲಿ ಸಾಕ್ಷಿ-1 ರವರು ಮನೆಯಲ್ಲಿ ಟಿವಿ ಹಾಕಿಕೊಂಡು ತನ್ನ ಚಿಕ್ಕ ಮಗುವಿಗೆ ರೈಮ್ಸ್ ತೋರಿಸುತ್ತ ಊಟ ಮಾಡಿಸುತ್ತಿರುವಾಗ ಆರೋಪಿತನಾದ ನೀನು ಏಕಾ ಏಕಿ ಬಂದು ಟಿವಿ ಆಫ್ ಮಾಡಿದ್ದು, ಅದಕ್ಕೆ ಸಾಕ್ಷಿ-1 ರವರು ಯಾಕೆ ಟಿವಿ ಆಫ್ ಮಾಡಿದ್ರಿ ಎಂದು ಕೇಳಿದ್ದಕ್ಕೆ ಸಾಕ್ಷಿ-1 ರವರ ಜೊತೆ ಗಲಾಟೆ ಮಾಡಿ ಅವರ ಮೈಕೈ ಎಲ್ಲಾ ಮುಟ್ಟಿ ಅವಮಾನ ಪಡಿಸಿದ್ದು, ಆ ಪ್ರಕಾರ ಕಲಂ 354 ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

2. ಎರಡನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಸಾಕ್ಷಿ-1 ರವರ ಮೈಕೈ ಮುಟ್ಟಿ ಅವಮಾನ ಪಡಿಸಿದ್ದಲ್ಲದೇ, ಕೈ ಮುಷ್ಟಿಯಿಂದ ಬಲಗಣ್ಣಿಗೆ ಗುದ್ದಿ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಪ್ರಕಾರ ಕಲಂ 323 ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

3. ಮೂರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಸಾಕ್ಷಿ-1 ರವರ ಮೈಕೈ ಮುಟ್ಟಿ ಅವಮಾನ ಪಡಿಸಿ ಕೈ ಮುಷ್ಟಿಯಿಂದ ಬಲಗಣ್ಣಿಗೆ ಗುದ್ದಿ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದಲ್ಲದೇ, ಮನೆಯಲ್ಲಿದ್ದ ಮಚ್ಚನ್ನು ತೆಗೆದುಕೊಂಡು ಬಂದು ಸಾಕ್ಷಿ-1ರವರಿಗೆ ಬೋಸುಡಿ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ತನ್ಮೂಲಕ ಸಾರ್ವಜನಿಕ ಶಾಂತತ ಭಂಗವುಂಟು ಮಾಡುವಂತೆ ಪ್ರಚೋದಿಸಿದ್ದು, ಆ ಪ್ರಕಾರ ಕಲಂ 504 ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

4. ನಾಲ್ಕನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಸಾಕ್ಷಿ-1 ರವರ ಮೈಕೈ ಮುಟ್ಟಿ ಅವಮಾನ ಪಡಿಸಿ ಕೈ ಮುಷ್ಟಿಯಿಂದ ಬಲಗಣ್ಣಿಗೆ ಗುದ್ದಿ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದಲ್ಲದೇ, ಮನೆಯಲ್ಲಿದ್ದ ಮಚ್ಚನ್ನು ತೆಗೆದುಕೊಂಡು ಬಂದು ಸಾಕ್ಷಿ-1ರವರಿಗೆ ಬೋಸುಡಿ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ನಿನಗೆ ಕೊಲೆ ಮಾಡುತ್ತೇನೆಂದು ಜೀವ ಬೆದರಿಕೆ ಹಾಕಿದ್ದಲ್ಲದೇ, 2-3 ಬಾರಿ ಮಚ್ಚನ್ನು ಬೀಸಿದಾಗ ಸಾಕ್ಷಿ-1 ರವರ ಬಲಪಕ್ಕೆಗೆ ಗಾಯವುಂಟು ಮಾಡಿದ್ದು, ಸಾಕ್ಷಿ-2 ರವರು ಸಾಕ್ಷಿ-1 ರವರನ್ನು ರಕ್ಷಣೆ ಮಾಡುವ ಉದ್ದೇಶದಿಂದ ಆರೋಪಿತನಾದ ನಿನ್ನ ಕೈಯಲ್ಲಿದ್ದ ಮಚ್ಚನ್ನು ಹಿಡಿದುಕೊಂಡಿದ್ದರಿಂದ ಸಾಕ್ಷಿ-2 ರವರ ಬಲಗೈಗೆ ರಕ್ತ ಗಾಯ ಸಂಭವಿಸಿ ಸಾಮಾನ್ಯ ಸ್ವರೂಪದ ಗಾಯವುಂಟಾಗಿದ್ದು, ಆ ಪ್ರಕಾರ ಕಲಂ 324 ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

5. ಐದನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಸಾಕ್ಷಿ-1 ರವರ ಮೈಕೈ ಮುಟ್ಟಿ ಅವಮಾನ ಪಡಿಸಿ ಕೈ ಮುಷ್ಟಿಯಿಂದ ಬಲಗಣ್ಣಿಗೆ ಗುದ್ದಿ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದಲ್ಲದೇ, ಮನೆಯಲ್ಲಿದ್ದ ಮಚ್ಚನ್ನು ತೆಗೆದುಕೊಂಡು ಬಂದು ಸಾಕ್ಷಿ-1ರವರಿಗೆ ಬೋಸುಡಿ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ, ನಿನಗೆ ಕೊಲೆ ಮಾಡುತ್ತೇನೆಂದು ಜೀವ ಬೆದರಿಕೆ ಹಾಕಿ, 2-3 ಬಾರಿ ಮಚ್ಚನ್ನು ಬೀಸಿದಾಗ ಸಾಕ್ಷಿ-1 ರವರ ಬಲಪಕ್ಕೆಗೆ ಗಾಯವುಂಟು ಮಾಡಿದ್ದಲ್ಲದೇ, ಕೊಲೆ ಮಾಡುವ ಉದ್ದೇಶದಿಂದ ಪುನಃ ಮಚ್ಚಿನಿಂದ ಸಾಕ್ಷಿ-1 ರವರ ತಲೆಗೆ ಹೊಡೆಯಲು ಹೋಗಿದ್ದು, ಒಂದಾನುವೇಳೆ ಸಾಕ್ಷಿ-1 ರವರ ತಲೆಗೆ ಹೊಡೆತ ಬಿದ್ದು ಮೃತಪಟ್ಟಿದ್ದಲ್ಲಿ ಯಾವ ಪ್ರಮಾಣದ ಶಿಕ್ಷೆಗೆ ಗುರಿಯಾಗಬೇಕಿತ್ತೋ ಆ ಪ್ರಮಾಣದ ಶಿಕ್ಷೆಗೆ ಅನುಗುಣವಾದ ಅಪರಾಧವನ್ನು ಎಸಗಿದ್ದು, ಆ ಪ್ರಕಾರ ಕಲಂ 307ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

6. ಆರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಸಾಕ್ಷಿ-1 ರವರ ಮೈಕೈ ಮುಟ್ಟಿ ಅವಮಾನ ಪಡಿಸಿ ಕೈ ಮುಷ್ಟಿಯಿಂದ ಬಲಗಣ್ಣಿಗೆ ಗುದ್ದಿ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದಲ್ಲದೇ, ಮನೆಯಲ್ಲಿದ್ದ ಮಚ್ಚನ್ನು ತೆಗೆದುಕೊಂಡು ಬಂದು ಸಾಕ್ಷಿ-1 ರವರಿಗೆ ಬೋಸುಡಿ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ, ನಿನಗೆ ಕೊಲೆ ಮಾಡುತ್ತೇನೆಂದು ಜೀವ ಬೆದರಿಕೆ ಹಾಕಿದ್ದು, 2-3 ಬಾರಿ ಮಚ್ಚನ್ನು ಬೀಸಿದಾಗ ಸಾಕ್ಷಿ-1 ರವರ ಬಲಪಕ್ಕೆಗೆ ಗಾಯವುಂಟು ಮಾಡಿದ್ದಲ್ಲದೇ, ಕೊಲೆ ಮಾಡುವ ಉದ್ದೇಶದಿಂದ ಪುನಃ ಮಚ್ಚಿನಿಂದ ಸಾಕ್ಷಿ-1 ರವರ ತಲೆಗೆ ಹೊಡೆಯಲು ಹೋದಾಗ ಸಾಕ್ಷಿ-2 ರವರು ಹೋಗಿ ಮಚ್ಚನ್ನು ಬಿಗಿಯಾಗಿ ಹಿಡಿದುಕೊಂಡು ಸಮಾಧಾನ ಪಡಿಸಿದ್ದು, ಆದರೂ ಸಹ ಆರೋಪಿತನಾದ ನೀನು ಸುಮ್ಮನಾಗದೇ ಮಚ್ಚನ್ನು ಬಿಡಲೇ ನಿನ್ನ ಹೆಂಡತಿ ಸಾಕ್ಷಿ-1 ರವರನ್ನು ಕೊಲೆ ಮಾಡಬೇಕೆಂದು ಕೂಗಾಡಿ ನಿಮಗೆ ಸುಮ್ಮನೆ ಬಿಡುವುದಿಲ್ಲ, ಮುಂದೊಂದು ದಿನ ಕೊಲೆ ಮಾಡೇ ತೀರುತ್ತೇನೆಂದು ಪ್ರಾಣ ಬೆದರಿಕೆ ಹಾಕಿದ್ದು, ಆ ಪ್ರಕಾರ ಕಲಂ 506 ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

7. ಇಂದು 13 ನೇ ತಾರೀಖು ಡಿಸೆಂಬರ್ ಮಾಹೆ 2024

( ಈ ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ಓದಿ, ತಿಳಿಸಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮ ತೆಗೆದುಕೊಳ್ಳಲಾಯಿತು.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.**

SC. No.40/2024

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
|---|---|---|
| ರಾಜ್ಯದ ಪರವಾಗಿ ದಾವಣಗೆರೆ ಬಡಾವಣೆ ಪೊಲೀಸ್ ಠಾಣೆ, ದಾವಣಗೆರೆ | | ವಿನಯ್ ಹೆಚ್.ಪಿ. ತಂದೆ ಪ್ರಕಾಶ್ ಹೆಚ್.ಪಿ. ವಯಸ್ಸು 39 ವರ್ಷ, ವಾಸಃ ನಂ.743/1, 10 ನೇ ಮೇನ್, 6 ನೇ ಕ್ರಾಸ್, ಪಿಜೆ ಬಡಾವಣೆ, ದಾವಣಗೆರೆ |

**ಆರೋಪಿಯ ಹೇಳಿಕೆ**

ಪ್ರಶ್ನೆ 1 – ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರ -

ಪ್ರಶ್ನೆ 2 – ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ -

(ಆರೋಪಿ ಹೇಳಿಕೆಯನ್ನು ಆತನ ಹೇಳಿಕೆ ಮೇರೆಗೆ ಮತ್ತು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

ದಿನಾಂಕ. 13-12-2024